# ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಬೆಂಗಳೂರು

## ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಎಸ್‌ಎಲ್‌ಡಿಸಿ ಶುಲ್ಕ ಮತ್ತು ದರಗಳ ವಿಧಿಸುವಿಕೆ ಮತ್ತು ಸಂಗ್ರಹಣೆ) ವಿನಿಯಮಗಳು-2004

ಅಧಿಸೂಚನೆ ಸಂಖ್ಯೆ ಬಿ/13/3 ದಿನಾಂಕ 7ನೆಯ ಜುಲೈ 2004

ಪ್ರಸ್ತಾವನೆ:

ವಿದ್ಯುಚ್ಛಕ್ತಿ ಅಧಿನಿಯಮ 2003ರ 31 ನೆಯ ಪ್ರಕರಣದಂತೆ, ರಾಜ್ಯ ಸರ್ಕಾರವು, ವಿದ್ಯುಚ್ಛಕ್ತಿ ಅಧಿನಿಯಮದಂತೆ ರಾಜ್ಯದೊಳಗೆ ವಿದ್ಯುಚ್ಛಕ್ತಿ ಪ್ರಸರಣವನ್ನು ನಿಯಂತ್ರಿಸುವ ಅಧಿಕಾರವನ್ನು ಮತ್ತು ಕಾರ್ಯ ನಿರ್ವಹಿಸುವ ಪ್ರಕಾರ್ಯಗಳನ್ನು ಚಲಾಯಿಸುವ ಉದ್ದೇಶಕ್ಕಾಗಿ ರಾಜ್ಯ ವಿದ್ಯುತ್ ರವಾನೆ ಕೇಂದ್ರ (ಎಸ್‌ಎಲ್‌ಡಿಸಿ) ಎಂದು ಕರೆಯಬಹುದಾದ ಕೇಂದ್ರವೊಂದನ್ನು ಸ್ಥಾಪಿಸುವ ಅಗತ್ಯವಿದೆ. ಎಸ್‌ಎಲ್‌ಡಿಸಿಯು, ರಾಜ್ಯ ಸರ್ಕಾರದಿಂದ ಅಧಿಸೂಚಿತವಾಗಬಹುದಾದಂತೆ ರಾಜ್ಯದ ಯಾವುದೇ ಅಧಿನಿಯಮದಂತೆ ಅಥವಾ ರಚಿತವಾದ ಅಥವಾ ಸ್ಥಾಪಿತವಾದ ಸರ್ಕಾರದ ಕಂಪನಿ ಅಥವಾ ಯಾವುದೇ ಇತರ ಪ್ರಾಧಿಕಾರ ಅಥವಾ ನಿಗಮವಾಗಿ ಕಾರ್ಯ ನಿರ್ವಹಿಸತಕ್ಕದ್ದು. ಕರ್ನಾಟಕ ಸರ್ಕಾರವು ಸರ್ಕಾರದ ಕಂಪನಿ ಅಥವಾ ಯಾವುದೇ ಪ್ರಾಧಿಕಾರ ಅಥವಾ ನಿಗಮವಾಗಿ ಅಧಿಸೂಚಿಸುವವರೆಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿ. ವು ರಾಜ್ಯ ಪ್ರಸರಣ ಸಂಸ್ಥೆಯಾಗಿ (ಎಸ್‌ಟಿಯು) ರಾಜ್ಯ ಲೋಡ್ ಡಿಸ್ಪ್ಯಾಚ್ ಸೆಂಟರ್ ಆಗಿ ಕಾರ್ಯ ನಿರ್ವಹಿಸತಕ್ಕದ್ದು.

ಅಧಿನಿಯಮದ 32ನೆಯ ಪ್ರಕರಣದ ನಿಬಂಧನೆಗಳಲ್ಲಿ, ಎಸ್‌ಎಲ್‌ಡಿಸಿಯು ರಾಜ್ಯದ ವಿದ್ಯುತ್ ಪದ್ಧತಿಯ ಸಮಗ್ರ ಕಾರ್ಯಾಚರಣೆಯನ್ನು ಖಚಿತ ಪಡಿಸಿಕೊಳ್ಳಲು ಇರುವ ಅಗ್ರ ಸಂಸ್ಥೆಯಾಗಿರತಕ್ಕದ್ದು. ಎಸ್‌ಎಲ್‌ಡಿಸಿಯು, ರಾಜ್ಯದ ಆಯೋಗ ನಿರ್ದಿಷ್ಟ ಪಡಿಸಬಹುದಾದಂತೆ, ಎಸ್‌ಎಲ್‌ಡಿಸಿಯು, ರಾಜ್ಯದೊಳಗೆ ವಿದ್ಯುತ್ ಪ್ರಸರಣದಲ್ಲಿ ತೊಡಗಿರುವ ಉತ್ಪಾದನಾ ಕಂಪನಿಗಳು ಮತ್ತು ಲೈಸೆನ್ಸುದಾರರಿಂದ ಶುಲ್ಕ ಮತ್ತು ದರಗಳನ್ನು ವಿಧಿಸಿ, ಸಂಗ್ರಹಿಸಬಹುದಾಗಿದೆ.

ಆದ್ದರಿಂದ, ಈಗ ಅಧಿನಿಯಮದ 32ನೆಯ ಪ್ರಕರಣದೊಂದಿಗೆ ಓದಲಾದ ಪ್ರಕರಣ 181 (2) (ಜ) ದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು, ರಾಜ್ಯದೊಳಗೆ ವಿದ್ಯುಚ್ಛಕ್ತಿ ಪ್ರಸರಣದಲ್ಲಿ ತೊಡಗಿರುವ ಎಸ್‌ಎಲ್‌ಡಿಸಿಯಿಂದ ನಿರ್ವಹಿಸಿ ಮತ್ತು ರವಾನಿಸುವ ಉತ್ಪಾದನಾ ಕೇಂದ್ರಗಳು ಮತ್ತು ಪ್ರಸರಣ ಲೈಸೆನ್ಸುದಾರರಿಂದ, ಶುಲ್ಕ ಮತ್ತು ದರಗಳನ್ನು ವಿಧಿಸಿ, ಸಂಗ್ರಹಿಸುವುದಕ್ಕಾಗಿ ಮುಂದಿನ ವಿನಿಯಮಗಳನ್ನು ರಚಿಸಿದೆ.

## ಅಧ್ಯಾಯ – I

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ

1.1 ಈ ವಿನಿಯಮಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ರಾಜ್ಯ ವಿದ್ಯುತ್ ರವಾನೆ ಕೇಂದ್ರದಿಂದ ಶುಲ್ಕ ಮತ್ತು ದರ ವಿಧಿಸುವಿಕೆ) ವಿನಿಯಮಗಳು, 2004 ಎಂದು ಕರೆಯಬಹುದಾಗಿದೆ. ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗತಕ್ಕದ್ದು.

1.2 ಅವು, ಕರ್ನಾಟಕ ರಾಜ್ಯದಲ್ಲಿ ಎಸ್‌ಎಲ್‌ಡಿಸಿಯಿಂದ ನಿರ್ವಹಣೆ ಮತ್ತು ರವಾನೆಯಾಗುವ ರಾಜ್ಯದೊಳಗಿನ ವಿದ್ಯುಚ್ಛಕ್ತಿ ಪ್ರಸರಣ ಮತ್ತು ಉತ್ಪಾದನಾ ಕೇಂದ್ರಗಳಲ್ಲಿ ತೊಡಗಿರುವ ಲೈಸೆನ್ಸುದಾರರಿಗೆ ಅನ್ವಯಿಸತಕ್ಕದ್ದು. ಈ ವಿನಿಯಮಗಳು, 5 ಮೆ.ವಾ. ಸೇರಿದಂತೆ ಮತ್ತು ಆವರೆಗಿನ ಸ್ಥಾಪಿತ ಸಾಮರ್ಥ್ಯದ ವಿದ್ಯುತ್ ಉತ್ಪಾದನಾ ಕೇಂದ್ರಗಳಿಗೆ ಅನ್ವಯಿಸತಕ್ಕದ್ದಲ್ಲ.

1.3 ಅವು, ಅಧಿನಿಯಮದ 31(1) ನೆಯ ಪ್ರಕರಣದಂತೆ ರಾಜ್ಯ ವಿದ್ಯುತ್ ರವಾನೆ ಕೇಂದ್ರವನ್ನು ಕರ್ನಾಟಕ ಸರ್ಕಾರವು ಸ್ಥಾಪಿಸುವ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

## ಅಧ್ಯಾಯ –II

2. ಪರಿಭಾಷೆಗಳು

2.1 'ಅಧಿನಿಯಮ' ವೆಂದರೆ ವಿದ್ಯುಚ್ಛಕ್ತಿ ಅಧಿನಿಯಮ, 2003

2.2 'ಬಿಲ್ಲಿಂಗ್ ತಿಂಗಳು' ಎಂದರೆ ತಿಂಗಳ ಕೊನೆಯ ದಿನಾಂಕದೊಂದಿಗೆ ಮುಗಿಯುವ ಕಾಲೆಂಡರ್ ತಿಂಗಳು.

2.3 'ಆಯೋಗ' ಎಂದರೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ.

2.4 'ಆರ್ಥಿಕ ವರ್ಷ' ಎಂದರೆ ಏಪ್ರಿಲ್ ಮೊದಲ ದಿನದಿಂದ ಆರಂಭವಾಗುವ ಮತ್ತು ನಂತರದ ಮಾರ್ಚಿ ತಿಂಗಳ 31 ನೆಯ ದಿನಕ್ಕೆ ಮುಕ್ತಾಯವಾಗುವ ವರ್ಷ.

2.5 ರಾಜ್ಯದೊಳಗಿನ ಪ್ರಸರಣ ಪದ್ಧತಿ ಎಂದರೆ ಅಂತರರಾಜ್ಯ ಪ್ರಸರಣ ಪದ್ಧತಿಗೆ ಹೊರತಾದ ವಿದ್ಯುಚ್ಛಕ್ತಿ ಪ್ರಸರಣಕ್ಕಾಗಿ ಇರುವ ಯಾವುದೇ ಪದ್ಧತಿ.

2.6 ಕ.ವಿ.ಸು. ಅಧಿನಿಯಮ ಎಂದರೆ ಕಾಲಕಾಲಕ್ಕೆ ತಿದ್ದು ಪಡಿಯಾದಂತೆ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣ ಅಧಿನಿಯಮ 1999.

2.7 'ರಾಜ್ಯ ಸರ್ಕಾರ' ಎಂದರೆ ಕರ್ನಾಟಕ ಸರ್ಕಾರ.

2.8 'ರಾಜ್ಯ ಲೋಡು ಡಿಸ್ಪ್ಯಾಚ್ ಕೇಂದ್ರ (ಎಸ್‌ಎಲ್‌ಡಿಸಿ) ಎಂದರೆ ಕರ್ನಾಟಕ ಸರ್ಕಾರದಿಂದ ಕರ್ನಾಟಕದಲ್ಲಿ ಸ್ಥಾಪಿತವಾದ ವಿದ್ಯುತ್ ರವಾನೆ ಕೇಂದ್ರ.

2.9 'ರಾಜ್ಯ ಪ್ರಸರಣ ಸಂಸ್ಥೆ' ಎಂದರೆ ಅಧಿನಿಯಮದಡಿಯಲ್ಲಿ ಕರ್ನಾಟಕ ಸರ್ಕಾರದಿಂದ ಅಧಿಸೂಚಿತವಾದಂತೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ.

2.10 'ಪ್ರಸರಣ ಲೈಸೆನ್ಸುದಾರ' ಎಂದರೆ ಪ್ರಸರಣ ಮಾರ್ಗಗಳನ್ನು ಸ್ಥಾಪಿಸಿ ಅಥವಾ ಕಾರ್ಯಾಚರಣೆಗೊಳಿಸಲು ಪ್ರಾಧಿಕೃತವಾದ ಲೈಸೆನ್ಸುದಾರ.

2.11 ಈ ವಿನಿಯಮದಲ್ಲಿ ಪರಿಭಾಷಿಸದಿರುವ ಪದಗಳು ಮತ್ತು ವಾಕ್ಯಾಂಶಗಳು ವಿದ್ಯುಚ್ಛಕ್ತಿ ಅಧಿನಿಯಮ, 2003 ಮತ್ತು ಕ.ವಿ.ಸು. ಅಧಿನಿಯಮ, 1999 ರಲ್ಲಿರುವ ಅದೇ ಅರ್ಥಗಳನ್ನು ಹೊಂದಿರತಕ್ಕದ್ದು. ಅಧಿನಿಯಮ ಮತ್ತು ಕವಿಸು ಅಧಿನಿಯಮಗಳ ನಡುವಿನ ಪದಗಳು ಮತ್ತು ವಾಕ್ಯಾಂಶಗಳಲ್ಲಿ ಯಾವುದೇ ಅಸಂಗತೆ ಉಂಟಾದ ಪ್ರಕರಣದಲ್ಲಿ ಅಧಿನಿಯಮದಲ್ಲಿರುವ ಉಪಬಂಧಗಳು ಚಾಲ್ತಿಯಲ್ಲಿರತಕ್ಕದ್ದು.

## ಅಧ್ಯಾಯ – III

### ಶುಲ್ಕ ಮತ್ತು ಎಸ್‌ಎಲ್‌ಡಿಸಿ ದರಗಳು

**3 ವಿದ್ಯುತ್ ಉತ್ಪಾದನಾ ಕೇಂದ್ರಗಳು ಮತ್ತು ಪ್ರಸರಣ ಲೈಸೆನ್ಸುದಾರರಿಂದ ಶುಲ್ಕಗಳು ಮತ್ತು ಎಸ್‌ಎಲ್‌ಡಿಸಿ ದರಗಳ ವಿಧಿಸುವಿಕೆ ಮತ್ತು ಸಂಗ್ರಹಣೆ.**

3.1 ಅಧಿನಿಯಮದ 31 ನೆಯ ಪ್ರಕರಣದಡಿಯಲ್ಲಿ ಕರ್ನಾಟಕ ಸರ್ಕಾರದಿಂದ ರಾಜ್ಯ ವಿದ್ಯುತ್ ರವಾನೆ ಕೇಂದ್ರವನ್ನು ಸ್ಥಾಪಿಸಿದ ದಿನಾಂಕದಿಂದ ಎಸ್‌ಎಲ್‌ಡಿಸಿ ಭರಿಸಿದ ಎಲ್ಲಾ ವೆಚ್ಚಗಳನ್ನು ಪ್ರತ್ಯೇಕವಾಗಿ ಲೆಕ್ಕವಿಡತಕ್ಕದ್ದು.

3.2 ಅಧಿನಿಯಮದ 32ನೆಯ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂತೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಎಸ್‌ಎಲ್‌ಡಿಸಿಯು ಮಾಡಿದ ವೆಚ್ಚಗಳನ್ನು ಎಸ್‌ಎಲ್‌ಡಿಸಿಯು ನಿರ್ವಹಿಸಿ, ರವಾನಿಸುವ ಉತ್ಪಾದನಾ ಕೇಂದ್ರಗಳು ಮತ್ತು ಪ್ರಸರಣ ಲೈಸೆನ್ಸುದಾರರಿಂದ ವಸೂಲು ಮಾಡತಕ್ಕದ್ದು.

3.3 ಈ ವಿನಿಯಮಗಳ ವ್ಯಾಪ್ತಿಗೆ ಬರುವ ಎಸ್‌ಎಲ್‌ಡಿಸಿಯಿಂದ ನಿರ್ವಹಿಸಿ ರವಾನಿಸುವ ಪ್ರತಿ ವಿದ್ಯುತ್ ಉತ್ಪಾದನಾ ಕೇಂದ್ರಗಳು ರಾಜ್ಯ ಗ್ರಿಡ್‌ಗೆ ಸಂಪರ್ಕಗೊಳ್ಳುವ ಕನಿಷ್ಠ ಒಂದು ತಿಂಗಳ ಮುಂಚಿತವಾಗಿ ರೂ. 10,000-00 (ಹತ್ತು ಸಾವಿರ ರೂ.) ಶುಲ್ಕದೊಂದಿಗೆ ನಿರ್ದಿಷ್ಟಪಡಿಸಿರುವ ನಮೂನೆಯಲ್ಲಿ ಎಸ್‌ಎಲ್‌ಡಿಸಿಗೆ ಅರ್ಜಿ ಸಲ್ಲಿಸತಕ್ಕದ್ದು. ಈ ವಿನಿಯಮಗಳ ವ್ಯಾಪ್ತಿಯಲ್ಲಿರುವ ಹಾಲಿ ಪ್ರಸರಣ ಲೈಸೆನ್ಸುದಾರರು

ಮತ್ತು ಉತ್ಪಾದನಾ ಕೇಂದ್ರಗಳು ಈ ಮೇಲೆ ಉಲ್ಲೇಖಿಸಿರುವ ಶುಲ್ಕಗಳೊಂದಿಗೆ ಅರ್ಜಿಯನ್ನು ತಾವಾಗಿಯೇ ಎಸ್‌ಎಲ್‌ಡಿಸಿಗೆ ಸಲ್ಲಿಸಿ ನೋಂದಾಣಿ ಮಾಡಿಕೊಳ್ಳತಕ್ಕದ್ದು.

3.4 ಎಸ್‌ಎಲ್‌ಡಿಸಿಯು ಸ್ವೀಕರಿಸಿದ ಅರ್ಜಿ ಪರಿಶೀಲಿಸಿದ ನಂತರ, ಅದರಲ್ಲಿ ಒದಗಿಸಿರುವ ಮಾಹಿತಿಯು ಸಂಪೂರ್ಣ ಮತ್ತು ನಿಖರವಾಗಿವೆ ಎಂದು ತೃಪ್ತಿಗೊಂಡನಂತರ ಅರ್ಜಿಯನ್ನು ಎಸ್‌ಎಲ್‌ಡಿಸಿಯ ದಾಖಲೆಗಳಲ್ಲಿ ನೋಂದಾಯಿಸಿಕೊಂಡು, ಅದರ ಸ್ವೀಕೃತಿಯ ಬಗೆಗೆ ಅರ್ಜಿದಾರನಿಗೆ ವಿದ್ಯುಕ್ತವಾಗಿ ತಿಳಿಸತಕ್ಕದ್ದು.

3.5 ಈ ಮುಂದಿನ ಅಂಶಗಳನ್ನು ಗಣನೆಗೆ ತೆಗೆದುಕೊಂಡು, ಎಸ್‌ಎಲ್‌ಡಿಸಿಯಿಂದ ನಿರ್ವಹಣೆ ಮತ್ತು ರವಾಣೆಯಾಗುವ ಉತ್ಪಾದನಾ ಕೇಂದ್ರಗಳು ಮತ್ತು ಪ್ರಸರಣ ಲೈಸೆನ್ಸುದಾರರಿಂದ ಎಸ್‌ಎಲ್‌ಡಿಸಿ ಶುಲ್ಕಗಳನ್ನು ವಸೂಲು ಮಾಡಬಹುದಾಗಿದೆ.

ಎ) ಸಿಬ್ಬಂದಿ ವೆಚ್ಚ

ಬಿ) ಆಡಳಿತ ಮತ್ತು ಸಾಮಾನ್ಯ ದರಗಳು

ಸಿ) ದುರಸ್ತಿ ಮತ್ತು ನಿರ್ವಹಣ ವೆಚ್ಚಗಳು

ಡಿ) ಸವಕಳಿ

ಇ) ಬಡ್ಡಿ ಮತ್ತು ಆರ್ಥಿಕ ಕರಗಳು

ಎಫ್) ಕಾರ್ಯಶೀಲ ಬಂಡವಾಳ ಯಾವುದಾದರೂ ಇದ್ದಲ್ಲಿ ಅದರ ಮೇಲೆ ಬಡ್ಡಿ

ಜಿ) ಈಕ್ವಿಟಿ/ಹೂಡಿಕೆಗಳ ಮೇಲಿನ ಲಾಭ

ಹೆಚ್) ಎಸ್‌ಎಲ್‌ಡಿಸಿಯು ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ಯಾವುದೇ ಇತರ ಆಕಸ್ಮಿಕ ವೆಚ್ಚಗಳು.

3.6 ಎಸ್‌ಎಲ್‌ಡಿಸಿ ದರಗಳ ಸಂಗ್ರಹಣೆಗೆ ಆಧಾರ. ಅನುಬಂಧ – 1 ರಂತೆ ವಾರ್ಷಿಕ ಎಸ್‌ಎಲ್‌ಡಿಸಿ ದರಗಳಿರತಕ್ಕದ್ದು, ಮತ್ತು ಅದನ್ನು ಎಸ್‌ಎಲ್‌ಡಿಸಿಯು ನಿರ್ವಹಿಸಿ ಮತ್ತು ರವಾನಿಸುವ ಉತ್ಪಾದನಾ ಕೇಂದ್ರಗಳು ಮತ್ತು ಪ್ರಸರಣ ಲೈಸೆನ್ಸುದಾರರಿಗೆ ಸಮಾನವಾಗಿ ಹಂಚಿಕೆ ಮಾಡತಕ್ಕದ್ದು. ಆನಂತರ, ಎಸ್‌ಎಲ್‌ಡಿಸಿಯು ನಿರ್ವಹಿಸಿ ರವಾನಿಸುವ ವ್ಯಕ್ತಿಗತ ಉತ್ಪಾದನಾ ಕೇಂದ್ರಗಳಿಗೆ ಸ್ಥಾಪಿತ ಉತ್ಪಾದನಾ ಸಾಮರ್ಥ್ಯದ ಆಧಾರದ ಮೇಲೆ ದರಗಳನ್ನು ಹಂಚಿಕೆ ಮಾಡತಕ್ಕದ್ದು. ವ್ಯಕ್ತಿಗತ ಪ್ರಸರಣ ಲೈಸೆನ್ಸುದಾರರಿಗೆ ಪ್ರಸರಣ ಜಾಲದ ಮೆ.ವಾ. ಕಿಲೋ ಮೀಟರ್ಸ್ ಆಧಾರದ ಮೇಲೆ ಕರಗಳ ಹಂಚಿಕೆ ಮಾಡತಕ್ಕದ್ದು.

## ಅಧ್ಯಾಯ – IV

4. **ಎಸ್‌ಎಲ್‌ಡಿಸಿಗೆ ಅಗತ್ಯವಿರುವ ವಾರ್ಷಿಕ ಆದಾಯದ ಸಲ್ಲಿಕೆ**

ಎ) ಆರ್ಥಿಕ ವರ್ಷದ ಪ್ರಾರಂಭಕ್ಕಿಂತ ಮುಂಚಿತ ನಾಲ್ಕು ತಿಂಗಳಿಗೆ ಕಡಿಮೆಯಿಲ್ಲದಂತೆ, ಬರುವ ಆರ್ಥಿಕ ವರ್ಷಕ್ಕಾಗಿ ಅಗತ್ಯವಿರುವ ವಾರ್ಷಿಕ ಆದಾಯದ ಅಂದಾಜು ಲೆಕ್ಕಾಚಾರದ ಪೂರ್ಣ ವಿವರಗಳು ಮತ್ತು ಪ್ರಸರಣ ಲೈಸೆನ್ಸುದಾರರು ಮತ್ತು ಉತ್ಪಾದನಾ ಕೇಂದ್ರಗಳಿಗೆ ಪ್ರಸ್ತಾವಿತ ಕರಗಳ ಹಂಚಿಕೆಯನ್ನು ಎಸ್‌ಎಲ್‌ಡಿಸಿಯು ಆಯೋಗಕ್ಕೆ ಒದಗಿಸತಕ್ಕದ್ದು. ವಿವರಗಳನ್ನು ಉತ್ಪಾದನಾ ಕೇಂದ್ರಗಳು ಮತ್ತು ಪ್ರಸರಣ ಲೈಸೆನ್ಸುದಾರರಿಗೆ ಒಂದೇ ಬಾರಿಗೆ ಕೂಡ ಸಲ್ಲಿಸತಕ್ಕದ್ದು.

ಬಿ) ಅನುಬಂಧ 1 ರಿಂದ 13 ರವರೆಗಿನ ನಿಗದಿತ ನಮೂನೆಗಳಲ್ಲಿ ವೆಚ್ಚಗಳು ಮತ್ತು ಇತರ ಸಂಬಂಧಿತ ಮಾಹಿತಿಯ ಲೆಕ್ಕಾಚಾರದ ವಿವರಗಳನ್ನು ಒದಗಿಸತಕ್ಕದ್ದು.

ಸಿ) ಅಗತ್ಯವಿರುವ ವಾರ್ಷಿಕ ಆದಾಯದ ಸಲ್ಲಿಕೆಯೊಂದಿಗೆ ಬರುವ ವರ್ಷದ ಬಂಡವಾಳ ಹೂಡಿಕಾ ಕಾರ್ಯಕ್ರಮದ ವಿವರಗಳನ್ನು ಒದಗಿಸತಕ್ಕದ್ದು. ಒಂದು ಕೋಟಿ ರೂ. ಗಿಂತಲೂ ಹೆಚ್ಚಿನ ಬೆಲೆಯ ಯೋಜನೆಗಳಿಗಾಗಿ ಪ್ರತಿ ಯೋಜನೆಗಳ ಸಂಬಂಧದಲ್ಲಿ ಅಂತಹ ಕಾಮಗಾರಿಗಳ ವಿವರವಾದ ಯೋಜನಾ ವರದಿಯ ಬಗೆಗಿನ ಪೂರ್ಣ ವಿವರಗಳನ್ನು ವಿಧಿವತ್ತಾಗಿ ಆಯೋಗಕ್ಕೆ ಸಲ್ಲಿಸಿ ನಿರ್ದಿಷ್ಟವಾದ ಪೂರ್ವಾನುಮೋದನೆಯನ್ನು ಪಡೆಯತಕ್ಕದ್ದು.

ಡಿ) ಎಸ್‌ಎಲ್‌ಡಿಸಿಯು ಅಗತ್ಯವಿರುವ ವಾರ್ಷಿಕ ಆದಾಯದ ಸಲ್ಲಿಕೆಯನ್ನು ಆರು ಪ್ರತಿಗಳಲ್ಲಿ ಅರ್ಜಿರೂಪದಲ್ಲಿ ಸಲ್ಲಿಸತಕ್ಕದ್ದು. ಆ ಆರು ಪ್ರತಿಗಳ ಪ್ರತಿ ಅರ್ಜಿ ನಮೂನೆಗೆ, ಅವುಗಳ ಪರಿಶೀಲನೆ ಮತ್ತು ಪ್ರಮಾಣೀಕರಣ ಹಾಗೂ ನಿಖರತೆಗೆ ಜವಾಬ್ದಾರನಾಗಿರುವ ಎಸ್‌ಎಲ್‌ಡಿಸಿಯ ಪ್ರಾಧಿಕೃತ ಅಧಿಕಾರಿಯೊಬ್ಬರು ಸಹಿ ಮಾಡಿರತಕ್ಕದ್ದು.

ಇ) ಎಸ್‌ಎಲ್‌ಡಿಸಿಯು ಸಲ್ಲಿಸಿದ ಅಗತ್ಯವಿರುವ ವಾರ್ಷಿಕ ಆದಾಯವನ್ನು ಆಯೋಗವು ಪರಿಶೀಲಿಸತಕ್ಕದ್ದು ಹಾಗೂ ಅಂತಹ ಪರಿಶೀಲನೆಯ ನಂತರ ಆಯೋಗವು ಹದಿನೈದು ಕಾರ್ಯ ನಿರತ ದಿನಗಳೊಳಗೆ ಅಗತ್ಯ ಬೀಳಬಹುದಾದ ಅಂತಹ ಹೆಚ್ಚಿನ ಮಾಹಿತಿ ಮತ್ತು ಸ್ಪಷ್ಟೀಕರಣ ಕೋರಬಹುದಾಗಿದೆ.

ಎಫ್) ಆಯೋಗವು ಆನಂತರ, ಎಸ್‌ಎಲ್‌ಡಿಸಿ ಸಲ್ಲಿಸಿದ ಅರ್ಜಿಯ ವಿಲೇವಾರಿಗಾಗಿ ಕ.ವಿ.ನಿ.ಆ. (ವ್ಯವಹರಣೆಗಳು ಸಾಮಾನ್ಯ ಮತ್ತು ನಡೆಸುವಿಕೆ) ವಿನಿಯಮಗಳಲ್ಲಿ ನಿರ್ದಿಷ್ಟಪಡಿಸಿರುವ ವ್ಯವಹರಣೆಗಳನ್ನು ಆದಷ್ಟು ವಾಸ್ತವಿಕವಾಗಿ ಅನುಸರಿಸುವುದು.

ಜಿ) ಆಯೋಗವು, ಅರ್ಜಿ ಅಥವಾ ಅನ್ಯಥಾ ಬಾಕಿಯಿರುವ ಯಾವುದೇ ಸಮಯದಲ್ಲಿ ಎಸ್‌ಎಲ್‌ಡಿಸಿಯ ಪುಸ್ತಕ/ದಾಖಲೆಗಳನ್ನು ಪಡೆದು, ತನ್ನ ಅಧಿಕಾರಿಗಳು ಮತ್ತು/ಅಥವಾ ಯಾವುದೇ ಪ್ರಾಧಿಕೃತ ವ್ಯಕ್ತಿಯಿಂದ ಪರಿಶೀಲಿಸಬಹುದಾಗಿದೆ. ಅಧಿಕಾರಿಗಳು ನೀಡಿದ ವರದಿಗಳು ಇತ್ಯಾದಿಗಳನ್ನು ಸಂಬಂಧಿಸಿದ ಪಕ್ಷಕಾರರಿಗೆ ದೊರೆಯುವಂತೆ ಮಾಡತಕ್ಕದ್ದು ಹಾಗೂ ಆ ವರದಿಗಳ ಬಗ್ಗೆ ಉತ್ತರ/ಪ್ರತಿಕ್ರಿಯಿಸಲು ಅವರಿಗೆ ಅವಕಾಶ ನೀಡತಕ್ಕದ್ದು. ಆಯೋಗವು, ಅಧಿಕಾರಿಗಳು ಮತ್ತು ಅಥವಾ ಯಾವುದೇ ಪ್ರಾಧಿಕೃತ ವ್ಯಕ್ತಿಗಳು ನೀಡಿದ ವರದಿ ಅಥವಾ ಅಭಿಪ್ರಾಯಗಳು ಮತ್ತು ಅವುಗಳ ಮೇಲೆ ಪಕ್ಷಕಾರರು ಸಲ್ಲಿಸಿದ ಉತ್ತರಗಳನ್ನು ಪರಿಗಣಿಸತಕ್ಕದ್ದು. ಹಾಗೂ ಅವುಗಳನ್ನು ಅಗತ್ಯವೆಂದು ಪರಿಗಣಿಸಿದರೆ ಆಯೋಗವು ವಿಷಯವನ್ನು ಇತ್ಯರ್ಥ ಪಡಿಸುವಾಗ ವರದಿ ಅಥವಾ ಅಭಿಪ್ರಾಯ ನೀಡಿದ ವ್ಯಕ್ತಿಯೊಂದಿಗೆ ಪರಿಶೀಲಿಸಬಹುದು.

ಹೆಚ್) ಆಯೋಗವು ಒದಗಿಸಿರುವ ತಾನು ಕೋರಿದ ಎಲ್ಲಾ ಮಾಹಿತಿ ಮತ್ತು ಸ್ಪಷ್ಟೀಕರಣಗಳಿಂದ ತೃಪ್ತಗೊಂಡ ನಂತರ ಸಂಬಂಧಿಸಿದ ಎಲ್ಲಾ ಪಕ್ಷಕಾರರಿಗೆ ಅನುಕೂಲವಾಗುವಂತೆ ಸಾಕಷ್ಟು ಅವಕಾಶ ನೀಡಿ, ಆಯೋಗವು ಅಗತ್ಯವಿರುವ ವಾರ್ಷಿಕ ಆದಾಯದ ಮೇಲೆ ಸೂಕ್ತ ಆದೇಶವನ್ನು ಹೊರಡಿಸಬಹುದಾಗಿದೆ. ಆಯೋಗವು, ಎಸ್‌ಎಲ್‌ಡಿಸಿಯಿಂದ ನಿರ್ವಹಣೆ ಮತ್ತು ರವಾನೆ ಮಾಡುವ ಉತ್ಪಾದನಾ ಕೇಂದ್ರಗಳು ಮತ್ತು ಪ್ರಸರಣ ಲೈಸೆನ್ಸುದಾರರಿಗೆ ಮೊದಲು ಅಗತ್ಯವಿರುವ ವಾರ್ಷಿಕ ಆದಾಯದಲ್ಲಿ ವಸೂಲು ಮಾಡಬಹುದಾದ ಎಸ್‌ಎಲ್‌ಡಿಸಿ ದರಗಳನ್ನು ಕೂಡ ನಿಗದಿಗೊಳಿಸುವುದು.

ಐ) ಆಯೋಗದಿಂದ ಹಾಗೆ ನಿಗದಿಗೊಳ್ಳುವ ಎಸ್‌ಎಲ್‌ಡಿಸಿ ಕರಗಳು, ಆ ನಂತರದಲ್ಲಿ ಪರಿಷ್ಕರಣೆಗೊಳ್ಳುವ ಕರಗಳ ಅನುಮೋದನೆಯಾಗುವವರೆಗೆ ಸಿಂಧುವಾಗಿರತಕ್ಕದ್ದು. ಎಸ್‌ಎಲ್‌ಡಿಸಿಯು, ಈ ಹಿಂದೆ ನಿಗದಿಗೊಳಿಸಿದ ಎಸ್‌ಎಲ್‌ಡಿಸಿ ಕರಗಳ ಬಗ್ಗೆ ಪರಿಗಣಿತವಾದ ಅಗತ್ಯವಿರುವ ವಾರ್ಷಿಕ ಆದಾಯದಲ್ಲಿ ಯಾವುದೇ ವರ್ಷದಲ್ಲಿ ಶೇಕಡ 10 ರಷ್ಟು ಹೆಚ್ಚು ಕಡಿಮೆಯಾದಾಗ ಮಾತ್ರ ಶುಲ್ಕಗಳ ಪರಿಷ್ಕರಣೆಗೆ ಕೋರತಕ್ಕದ್ದು.

ಜೆ) ಎಸ್‌ಎಲ್‌ಡಿಸಿಯು ದರಗಳ ಪರಿಷ್ಕರಣೆ ಅಗತ್ಯವಿಲ್ಲದಿದ್ದಾಗಲೂ ಕೂಡ ಪ್ರತಿ ವರ್ಷ ಎಆರ್‌ಆರ್ ಅನ್ನು ಸಲ್ಲಿಸತಕ್ಕದ್ದು

ಕೆ) ಮೇಲಿನ 4.1 (ಐ)ನಲ್ಲಿ ನೋಡಿದ ಕಾರಣಗಳಿಗಾಗಿ ಯಾವುದೇ ವರ್ಷದಲ್ಲಿ ಎಸ್‌ಎಲ್‌ಡಿಸಿ ದ್ರಗಳು ಪರಿಷ್ಕರಣೆಯಾಗದಿದ್ದ ಪ್ರಕರಣದಲ್ಲಿ ಎಸ್‌ಎಲ್‌ಡಿಸಿ ಶುಲ್ಕಗಳ ವಸೂಲಾತಿಯಲ್ಲಿ ಆಗುವ ಕೊರತೆ ಅಥವಾ ಹೆಚ್ಚಳವನ್ನು ಮುಂದಿನ ಅಗತ್ಯವಿರುವ ವಾರ್ಷಿಕ ಆದಾಯ (ಎಆರ್‌ಆರ್) ಕ್ಕೆ ಒಯ್ಯತಕ್ಕದ್ದು.

ಎಲ್) ಎಸ್‌ಎಲ್‌ಡಿಸಿ ಆಯೋಗವು ನಿಗದಿಪಡಿಸಬಹುದಾದಂತೆ, ನಿರ್ವಹಣಾ ಮತ್ತು ವೆಚ್ಚದ ಮಾಹಿತಿಯೊಳಗೊಂಡ ವರದಿಗಳನ್ನು ನಿಯತವಾಗಿ ಸಲ್ಲಿಸತಕ್ಕದ್ದು.

ಎಂ) ಎಲ್ಲಾ ಸಲ್ಲಿಕೆಗಳು, ಈ ವಿನಿಯಮಗಳಲ್ಲಿ ಗೊತ್ತು ಪಡಿಸಿರುವುದಕ್ಕೆ ಅನುರೂಪವಾಗಿರತಕ್ಕದ್ದು.

## ಅಧ್ಯಾಯ – V

## ಎಸ್‌ಎಲ್‌ಡಿಸಿಯ ದರಗಳ ಬಿಲ್ಲಿಂಗ್ ಮತ್ತು ಸಂಗ್ರಹಣೆ

### 5.01 ಎಸ್‌ಎಲ್‌ಡಿಸಿ ದರಗಳ ಬಿಲ್ಲಿಂಗ್

ಎ) ಎಸ್‌ಎಲ್‌ಡಿಸಿಯು, ಹಿಂದಿನ ತಿಂಗಳ ಕೊನೆಯ ದಿನದ ನಂತರ ಏಳು ದಿನಗಳೊಳಗಾಗಿ ಪ್ರತಿ ಬಿಲ್ಲಿಂಗ್ ತಿಂಗಳಿಗಾಗಿ

ಎಸ್‌ಎಲ್‌ಡಿಸಿಯಿಂದ ನಿರ್ವಹಣೆ ಮತ್ತು ರವಾನೆಯಾದ ಉತ್ಪಾದನಾ ಕೇಂದ್ರಗಳು ಮತ್ತು ಪ್ರಸರಣ ಲೈಸೆನ್ಸುದಾರರಿಗೆ ಆಯೋಗದಿಂದ ಅನುಮೋದಿತವಾದ ವಾರ್ಷಿಕ ದರಗಳ ಹನ್ನೆರಡನೇ ಒಂದರ ದರದಲ್ಲಿ ಮಾಸಿಕ ಬಿಲ್ಲುಗಳನ್ನು ಅಗತ್ಯವಾಗಿ ಸಲ್ಲಿಸತಕ್ಕದ್ದು.

ಬಿ) ಉತ್ಪಾದನಾ ಕಂಪನಿಗಳು ಮತ್ತು ಪ್ರಸರಣ ಲೈಸೆನ್ಸುದಾರರು ಬಿಲ್ಲು ಸ್ವೀಕರಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಬಾಕಿಯಿರುವ ಮೊತ್ತವನ್ನು ಎಸ್‌ಎಲ್‌ಡಿಸಿಗೆ ಸಂದಾಯ ಮಾಡತಕ್ಕದ್ದು.

ಸಿ) ಗಡುವು ದಿನಾಂಕದೊಳಗೆ ಹಣವನ್ನು ಪಾವತಿ ಮಾಡದಿದ್ದಲ್ಲಿ, ಪಾವತಿ ಮಾಡದ ಮೊತ್ತದ ಮೇಲೆ ಎಸ್‌ಬಿಐ ನ ಪ್ರಧಾನ ಸಾಲದ ದರದಲ್ಲಿ ದಂಡ ರೂಪದ ಬಡ್ಡಿ ಮತ್ತು (+) ವಾರ್ಷಿಕ ಎರಡರಷ್ಟು ಪಾವತಿ ಪಾವತಿಮಾಡತಕ್ಕದ್ದು.

ಡಿ) ಎಸ್‌ಎಲ್‌ಡಿಸಿ ದರಗಳ ಪಾವತಿಗಾಗಿ ಆದ್ಯತೆ: ಎಸ್‌ಎಲ್‌ಡಿಸಿಯಿಂದ ನಿರ್ವಹಣೆ ಮತ್ತು ರವಾನೆಯಾಗುವ ಉತ್ಪಾದನಾ ಕೇಂದ್ರಗಳು ಮತ್ತು ಪ್ರಸರಣ ಲೈಸೆನ್ಸುದಾರರು, ಶಾಸನೀಯ ಸಂದಾಯಗಳ ಹೊರತು ಪಡಿಸಿ, ಸಂದಾಯಗಳ ಸಮಗ್ರತೆಯ ಮೊದಲ ದರದ ಆಧಾರದ ಮೇಲೆ ಎಸ್‌ಎಲ್‌ಡಿಸಿಯ ದರಗಳ ಸಂದಾಯಕ್ಕೆ ವ್ಯವಸ್ಥೆ ಮಾಡತಕ್ಕದ್ದು.

ಇ) ಬಿಲ್ಲಿಂಗ್‌ನಲ್ಲಿ ವಿವಾದ: ಎಸ್‌ಎಲ್‌ಡಿಸಿಯ ದರಗಳ ಬಿಲ್ಲಿಂಗ್‌ಗೆ ಹೊರತಾಗಿ ಉದ್ಭವವಾಗುವ ವಿವಾದಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಪರಸ್ಪರ ಸಂಧಾನದ ಮೂಲಕ ಇತ್ಯರ್ಥ ಪಡಿಸಿಕೊಳ್ಳತಕ್ಕದ್ದು. ಬಿಲ್ಲುಗಳನ್ನು ಸ್ವೀಕರಿಸಿದ ಅರವತ್ತು ದಿನಗಳ ಒಳಗಾಗಿ ಪರಸ್ಪರ ಮಾತುಕತೆಯ ಮೂಲಕ ವಿವಾದವನ್ನು ಪರಿಹರಿಸಿಕೊಳ್ಳದಿದ್ದಲ್ಲಿ, ಉಭಯ ಪಕ್ಷಕಾರರ ಪೈಕಿ ಯಾರಾದರೂ ಅರ್ಜಿ ಮೂಲಕ ಈ ವಿಷಯವನ್ನು ಆಯೋಗಕ್ಕೆ ಒಪ್ಪಿಸತಕ್ಕದ್ದು. ಆಯೋಗದ ನಿರ್ಧಾರಕ್ಕೆ ಉಭಯ ಪಕ್ಷಕಾರರು ಬದ್ಧವಾಗಿರತಕ್ಕದ್ದು.

ಎಫ್) ವಾಯಿದೆ ದಿನಾಂಕದೊಳಗೆ ಪ್ರತಿಭಟನೆಯಂತೆ ವಿವಾದದ ನಿರ್ಣಯ ಬಾಕಿಯಿರಿಸಿ, ಬಿಲ್ಲಿನ ಮೊತ್ತದ ಶೇಕಡಾ 90ರಷ್ಟನ್ನು ಪಾವತಿ ಮಾಡತಕ್ಕದ್ದು.

## ಅಧ್ಯಾಯ – VI

### ಇತರೆ

6.01 ಎ) ಈ ವಿನಿಯಮಗಳಲ್ಲಿನ ಯಾವುದೂ, ನ್ಯಾಯ ದೊರಕಿಸುವ ಗುರಿಯನ್ನು ಸಾಧಿಸಲು ಅಗತ್ಯವಾಗಬಹುದಾದ, ಅಂತಹ ಆದೇಶಗಳನ್ನು ನೀಡಲು ಆಯೋಗದ ಅಧಿಕಾರವನ್ನು ಮೊಟಕು ಅಥವಾ ಅನ್ಯಥಾ ಬಾಧಕಗೊಳ್ಳುವುದೆಂದು ಪರಿಭಾವಿಸತಕ್ಕದ್ದಲ್ಲ.

ಬಿ) ಈ ವಿನಿಯಮಗಳಲ್ಲಿನ ಯಾವುದೂ, ವಿಷಯದ ಅಥವಾ ವಿಷಯದ ವರ್ಗದ ವಿಶೇಷ ಸಂದರ್ಭಗಳ ದೃಷ್ಟಿಯಲ್ಲಿ ಮತ್ತು ಅಂತಹ ವಿಷಯದ ಅಥವಾ ವಿಷಯಗಳ ವರ್ಗವನ್ನು ಇತ್ಯರ್ಥ ಪಡಿಸುವುದಕ್ಕಾಗಿ ಅರ್ಹಗೊಳ್ಳುವ ಸದ್ಯ ಅಥವಾ ಯುಕ್ತ ವಾದವುಗಳನ್ನು ಲಿಖಿತ ರೂಪದಲ್ಲಿ ದಾಖಲಿಸುವ ಕಾರಣಗಳಿಗಾಗಿ ಆಯೋಗವು ಈ ವಿನಿಯಮಗಳ ಯಾವುದೇ ಉಪಬಂಧಗಳೊಂದಿಗೆ ವ್ಯತ್ಯಾಸವಾಗಿರುವ ವ್ಯವಹರಣೆಯು ಅಧಿನಿಯಮದ ಉಪಬಂಧಗಳೊಂದಿಗೆ ಅನುರೂಪವಾಗಿ ಅಳವಡಿಸಿಕೊಳ್ಳುವುದರಿಂದ ಅದನ್ನು ಪ್ರತಿಬಂಧಿಸತಕ್ಕದ್ದಲ್ಲ.

ಸಿ) ಈ ವಿನಿಯಮಗಳು, ಯಾವುದೇ ವಿನಿಯಮಗಳನ್ನು ರಚಿಸದಿರುವುದಕ್ಕಾಗಿ ಆಯೋಗವನ್ನು, ಅಧಿನಿಯಮದಂತೆ ಯಾವುದೇ ವಿಷಯದೊಂದಿಗೆ ವ್ಯವಹರಣೆ ಅಥವಾ ಯಾವುದೇ ಅಧಿಕಾರದ ಚಲಾವಣೆಗೆ ಅಭಿವ್ಯಕ್ತಿ ಅಥವಾ ಸೂಚಿತವಾಗಿ ಪ್ರತಿ ಬಂಧಿಸತಕ್ಕದ್ದಲ್ಲ ಮತ್ತು ಆಯೋಗವು ಅಂತಹ ವಿಷಯಗಳು, ಅಧಿಕಾರಗಳು ಮತ್ತು ಕರ್ತವ್ಯಗಳ ದೃಷ್ಟಿಯಲ್ಲಿ ಅದು ನ್ಯಾಯಸಮ್ಮತ ಮತ್ತು ಯುಕ್ತವೆಂದು ಪರಿಗಣಿಸಿ ವ್ಯವಹರಿಸಬಹುದಾಗಿರುವುದನ್ನು ಪ್ರತಿಬಂಧಿಸತಕ್ಕದ್ದಲ್ಲ.

ಆಯೋಗದ ಆದೇಶದ ಮೇರೆಗೆ

ಸಹಿ

ಕಾರ್ಯದರ್ಶಿ

ಅನುಬಂಧ– 1

| ಕ್ರಮ ಸಂಖ್ಯೆ | ವಿವರ | ಅನುಬಂಧ ಸಂಖ್ಯೆ | ಹಿಂದಿನ ವರ್ಷ (ವಾಸ್ತವಾಂಶ) | ಪ್ರಸಕ್ತ ವರ್ಷ (ಮೊದಲ 6 ತಿಂಗಳ ವಾಸ್ತವಾಂಶ ಮತ್ತು ಉಳಿದ ಅವಧಿಯ ಅಂದಾಜು) | ಮುಂಬರುವ ವರ್ಷ | ಷರಾ |
|---|---|---|---|---|---|---|
| 1 | ನೌಕರರ ವೆಚ್ಚ | | | | | |
| 2 | ಆಡಳಿತಾತ್ಮಕ ಮತ್ತು ಸಾಮಾನ್ಯ ವೆಚ್ಚಗಳು | | | | | |
| 3 | ದುರಸ್ತಿ ಮತ್ತು ನಿರ್ವಹಣಾ ವೆಚ್ಚಗಳು | | | | | |
| 4 | ಸವಕಳಿ | | | | | |
| 5 | ಬಡ್ಡಿ ಮತ್ತು ಹಣಕಾಸು ಖರ್ಚು | | | | | |
| 6 | ಕಾರ್ಯ ಬಂಡವಾಳದ ಮೇಲಿನ ಬಡ್ಡಿ | | | | | |
| 7 | ಇತರ ವೆಚ್ಚಗಳು | | | | | |
| 8 | ಪೂರ್ವಾವಧಿ ಹೊಂದಾಣಿಕೆ (+/-) | | | | | |
| 9 | ಬಂಡವಾಳ/ ಹೂಡಿಕೆ ಮೇಲಿನ ಲಾಭ | | | | | |
| 10 | ಒಟ್ಟು ಆದಾಯದ ಅಗತ್ಯತೆ | | | | | |
| 11 | ಕಳೆ ಇತರ ಆದಾಯ (ಶುಲ್ಕ ಇತ್ಯಾದಿ) | | | | | |
| 12 | ಒಟ್ಟು ಎಆರ್ಆರ್ | | | | | |
| 13 | ಉತ್ಪಾದನಾ ಕೇಂದ್ರಕ್ಕೆ ಹಣದ ಹಂಚಿಕೆ (ಕ್ರ.ಸಂ. 2ರ ಶೇ.50ರಷ್ಟು) | | | | | |
| 14 | ಪ್ರಸರಣ ಲೈಸೆನ್ಸುದಾರರಿಗೆ ಹಣದ ಹಂಚಿಕೆ (ಕ್ರ.ಸಂ.12ರ ಶೇ.50ರಷ್ಟು) | | | | | |

## ಹಣಕಾಸು ವರ್ಷಕ್ಕೆ ಉತ್ಪಾದನಾ ಕೇಂದ್ರ ಮತ್ತು ಪ್ರಸರಣ ಲೈಸೆನ್ಸ್‌ದಾರರಿಂದ ಆದಾಯದ ಅಂದಾಜು

ಅನುಬಂಧ - 2

| ಕ್ರಮ ಸಂಖ್ಯೆ | ವಿವರ | ಮೆ.ವ್ಯಾ. ಗಳಲ್ಲಿ ಉತ್ಪಾದನಾ ಸಾಮರ್ಥ್ಯ/ ಮೆ.ವ್ಯಾ ಕಿ.ಮೀ. ಗಳಲ್ಲಿ ಪ್ರಸರಣ ಸಾಮರ್ಥ್ಯ | ಉತ್ಪಾದನಾ ಕೇಂದ್ರ ಮತ್ತು ಪ್ರಸರಣ ಲೈಸೆನ್ಸ್‌ದಾರರಿಂದಸಂಗ್ರ"ಸಿದ ಅದಾಯದ ಮೊತ್ತ (ಲಕ್ಷ ರೂ.ಗಳಲ್ಲಿ) | | | ಷರಾ |
|---|---|---|---|---|---|---|
| | | | ಹಿಂದಿನ ವರ್ಷ (ವಾಸ್ತವಾಂಶ) | ಪ್ರಸಕ್ತ ವರ್ಷ (ಮೊದಲ 6 ತಿಂಗಳ ವಾಸ್ತವಾಂಶ ಮತ್ತು ಉಳಿದ ಅವಧಿಯ ಅಂದಾಜು) | ಮುಂಬರುವ ವರ್ಷ | |
| 1 | .... ಉತ್ಪಾದನಾ ಕೇಂದ್ರ | | | | | |
| 2 | .... ಉತ್ಪಾದನಾ ಕೇಂದ್ರ | | | | | |
| 3 | .... ಉತ್ಪಾದನಾ ಕೇಂದ್ರ | | | | | |
| 4 | .... ಉತ್ಪಾದನಾ ಕೇಂದ್ರ | | | | | |
| 5 | .... ಉತ್ಪಾದನಾ ಕೇಂದ್ರ | | | | | |
| 6 | .... ಉತ್ಪಾದನಾ ಕಂಪೆನಿ | | | | | |
| | .... ಉತ್ಪಾದನಾ ಕೇಂದ್ರ ಒಟ್ಟು | | | | | |
| 1 | ... ಪ್ರಸರಣ ಲೈಸೆನ್ಸ್‌ದಾರರು | | | | | |
| 2 | ... ಪ್ರಸರಣ ಲೈಸೆನ್ಸ್‌ದಾರರು | | | | | |
| 3 | ... ಪ್ರಸರಣ ಲೈಸೆನ್ಸ್‌ದಾರರು | | | | | |
| 4 | .... ಪ್ರಸರಣ ಲೈಸೆನ್ಸ್‌ದಾರರು ಇತರೆ... | | | | | |
| | ... ಪ್ರಸರಣ ಲೈಸೆನ್ಸ್‌ದಾರರಿಂದ ಒಟ್ಟು | | | | | |
| | ಒಟ್ಟು ಮೊತ್ತ | | | | | |

| ನೌಕರರ ವೆಚ್ಚ | | | | | ಅನುಬಂಧ - 3 |
|---|---|---|---|---|---|
| ಕ್ರಮ ಸಂಖ್ಯೆ | ವಿವರ | ಹಿಂದಿನ ವರ್ಷ (ವಾಸ್ತವಾಂಶ) | ಪ್ರಸಕ್ತ ವರ್ಷ (ಮೊದಲ 6 ತಿಂಗಳ ವಾಸ್ತವಾಂಶ ಮತ್ತು ಉಳಿದ ಅವಧಿಯ ಅಂದಾಜು) | ಮುಂಬರುವ ವರ್ಷ | ಷರಾ |
| 1 | ವೇತನ | | | | |
| 2 | ಹೆಚ್ಚುವರಿ ಕಾರ್ಯಾವಧಿ/ದುಪ್ಪಟ್ಟು ವೇತನ | | | | |
| 3 | ತುಟ್ಟಿ ಭತ್ಯೆ | | | | |
| 4 | ಇತರ ಭತ್ಯೆಗಳು | | | | |
| 5 | ಬೋನಸ್/ಅನುಗ್ರಹ ಕೊಡುಗೆ | | | | |
| 6 | ಉಪ ಮೊತ್ತ (1 ರಿಂದ 5) | | | | |
| 7 | ವೈದ್ಯಕೀಯ ವೆಚ್ಚ | | | | |
| 8 | ರಜಾ ದಿನದ ಪ್ರಯಾಣ ವೆಚ್ಚ | | | | |
| 9 | ಗಳಿಕೆ ರಜೆಯ ನಗದೀಕರಣ | | | | |
| 10 | ಇತರ ವೆಚ್ಚಗಳಾದ : ನೌಕರರ ವೆಚ್ಚ | | | | |
| 11 | ಉಪ ಮೊತ್ತ (7 ರಿಂದ 10) | | | | |
| 12 | ಸಿಬ್ಬಂದಿ ಕಲ್ಯಾಣ ವೆಚ್ಚ | | | | |
| 13 | ಸೇವಾಂತ್ಯ ಸೌಲಭ್ಯಗಳು/ಅವಕಾಶಗಳು | | | | |
| 14 | ಉಪ ಮೊತ್ತ (12 ರಿಂದ 13) | | | | |
| | ಒಟ್ಟು ಮೊತ್ತ | | | | |

## ನೌಕರರ ವೆಚ್ಚ – ಹೆಚ್ಚುವರಿ ಮಾಹಿತಿಗಳು            ಅನುಬಂಧ – 4

| ಕ್ರಮ ಸಂಖ್ಯೆ | ನೌಕರರ ವರ್ಗ | ಹಿಂದಿನ ವರ್ಷ | | | ಪ್ರಸಕ್ತ ವರ್ಷ | | | ಮುಂಬರುವ ವರ್ಷ | | |
|---|---|---|---|---|---|---|---|---|---|---|
| | | ಸಂಖ್ಯೆಗಳು | | ವೆಚ್ಚಗಳು | ಸಂಖ್ಯೆಗಳು | | ವೆಚ್ಚಗಳು | ಸಂಖ್ಯೆಗಳು | | ವೆಚ್ಚಗಳು |
| | | ಮಂಜೂರು ಮಾಡಿದ್ದು | ಕಾರ್ಯನಿರತ | ಲಕ್ಷ ರೂ. ಗಳಲ್ಲಿ | ಮಂಜೂರು ಮಾಡಿದ್ದು | ಕಾರ್ಯನಿರತ | ಲಕ್ಷ ರೂ. ಗಳಲ್ಲಿ | ಮಂಜೂರು ಮಾಡಿದ್ದು | ಕಾರ್ಯನಿರತ | ಲಕ್ಷ ರೂ. ಗಳಲ್ಲಿ |
| 1 | ಆಡಳಿತ ಮಂಡಳಿ ನಿರ್ದೇಶಕರು | | | | | | | | | |
| 2 | ಮುಖ್ಯ ಅಭಿಯಂತರು ಮತ್ತು ಸಮಾನರು | | | | | | | | | |
| 3 | ಎಸ್.ಇ. ಮತ್ತು ಅದಕ್ಕೆ ಸಮಾನರು | | | | | | | | | |
| 4 | ಇ.ಇ. ಮತ್ತು ಅದಕ್ಕೆ ಸಮಾನರು | | | | | | | | | |
| 5 | ಎ.ಇ.ಇ. ಮತ್ತು ಅದಕ್ಕೆ ಸಮಾನರು | | | | | | | | | |
| 6 | ಎ.ಇ. ಮತ್ತು ಅದಕ್ಕೆ ಸಮಾನರು | | | | | | | | | |
| 7 | ಇತರ ಎಲ್ಲಾ ಸಿಬ್ಬಂದಿ | | | | | | | | | |
| | ಮೊತ್ತ | | | | | | | | | |

ಸೂಚನೆ : ನಿರಂತರ ವರ್ಷಾಂತ್ಯದ ಆಧಾರದಲ್ಲಿ ನೌಕರರ ಸಂಖ್ಯೆಯನ್ನು ಕೊಡಬೇಕು

ವೆಚ್ಚದ ಕಾಲಂನಲ್ಲಿ ಕಾರ್ಯನಿರ್ವಹಿಸುತ್ತಿರುವ ನಿಜವಾದ ಸಂಖ್ಯೆಯ ಕಾರ್ಮಿಕರ ಸಂಭಾವನೆ ಮಾತ್ರ ಸೇರಿಸಬೇಕು

| ಆಡಳಿತಾತ್ಮಕ ಮತ್ತು ಸಾಮಾನ್ಯ ವೆಚ್ಚ ಅನುಬಂಧ – 5 | | | | | |
|---|---|---|---|---|---|
| ಕ್ರಮ ಸಂಖ್ಯೆ | ವಿವರ | ಹಿಂದಿನ ವರ್ಷ (ವಾಸ್ತವಾಂಶ) | ಪ್ರಸಕ್ತ ವರ್ಷ (ಮೊದಲ 6 ತಿಂಗಳ ವಾಸ್ತವಾಂಶ ಮತ್ತು ಉಳಿದ ಅವಧಿಯ ಅಂದಾಜು) | ಮುಂದಿನ ವರ್ಷಕ್ಕೆ ಅಂದಾಜು | ಷರಾ |
| 1 | ಬಾಡಿಗೆ, ದರಗಳು ಮತ್ತು ತೆರಿಗೆ | | | | |
| 2 | ಭದ್ರತಾ ವ್ಯವಸ್ಥೆ | | | | |
| 3 | ವಿಮೆ | | | | |
| 4 | ದೂರವಾಣಿ ಖರ್ಚುಗಳು ಅಂಚೆ, ಟೆಲಿಗ್ರಾಂ, ಟೆಲೆಕ್ಸ್ ಮತ್ತು ಫ್ಯಾಕ್ಸ್ ಖರ್ಚುಗಳು. | | | | |
| 5 | ವಿ ಸ್ಯಾಟ್, ಇಂಟರ್‌ನೆಟ್ ಮತ್ತು ಸಂಬಂಧಪಟ್ಟ ಖರ್ಚುಗಳು | | | | |
| 6 | ಕಾನೂನು ವೆಚ್ಚಗಳು | | | | |
| 7 | ಲೆಕ್ಕ ಪರಿಶೋಧನೆ ಖರ್ಚು | | | | |
| 8 | ಸಲಹಾ ವೆಚ್ಚಗಳು | | | | |
| 9 | ತಾಂತ್ರಿಕ ಶುಲ್ಕ | | | | |
| 10 | ಇತರ ವೃತ್ತಿಪರ ಖರ್ಚುಗಳು | | | | |
| 11 | ಪ್ರವಾಸ ವೆಚ್ಚ | | | | |
| 12 | ವಾಹನ ಭತ್ಯೆ ಮತ್ತು ವಾಹನ ಬಾಡಿಗೆ ಖರ್ಚು | | | | |
| 13 | ಉಪ ಮೊತ್ತ (1 ರಿಂದ 12) | | | | |
| 14 | ಇತರ ವೆಚ್ಚ | | | | |
| | ಎ) ಶುಲ್ಕ ಮತ್ತು ಚಂದಾ | | | | |
| | ಬಿ) ಪುಸ್ತಕ ಮತ್ತು ನಿಯತಕಾಲಿಕ | | | | |
| | ಸಿ) ಕಂಪ್ಯೂಟರ್ ಸಾಮಗ್ರಿಗಳು | | | | |
| | ಡಿ) ಮುದ್ರಣ ಮತ್ತು ಸಾಮಗ್ರಿ | | | | |
| | ಇ) ಜಾಹೀರಾತು | | | | |
| | ಎಫ್) ಕೊಡುಗೆ/ದಾನ | | | | |
| | ಜಿ) ವಿದ್ಯುಚ್ಛಕ್ತಿ ಖರ್ಚು | | | | |
| | ಎಚ್) ನೀರಿನ ಖರ್ಚು | | | | |
| | ಐ) ಮನರಂಜನಾ ವೆಚ್ಚ | | | | |
| | ಜೆ) ಇತರ ಖರ್ಚುಗಳು | | | | |
| 15 | ಉಪ ಮೊತ್ತ (ಎ ಯಿಂದ ಜೆ) | | | | |
| 16 | ಸಾಗಣೆ | | | | |
| 17 | ಇತರ ಖರೀದಿ ಮತ್ತಿತರ ವೆಚ್ಚಗಳು | | | | |
| 18 | ಒಟ್ಟು ಮೊತ್ತ | | | | |

ಸೂಚನೆ: ಮೇಲಿನ ಪ್ರತಿಯೊಂದು ವಿಷಯಗಳಲ್ಲಿ ಒಂದು ಕೋಟಿಗಿಂತ ಹೆಚ್ಚು ವೆಚ್ಚವಾದಲ್ಲಿ ಅಂತಹ ಖರ್ಚಿನ ಪೂರ್ಣ ವಿವರಗಳನ್ನು ಪ್ರತ್ಯೇಕವಾಗಿ ನೀಡಬೇಕು

## ದುರಸ್ಥಿ ಮತ್ತು ನಿರ್ವಹಣಾ ವೆಚ್ಚ ಅನುಬಂಧ – 6

| ಕ್ರಮ ಸಂಖ್ಯೆ | ವಿವರಗಳು | ಹಿಂದಿನ ವರ್ಷ | | | ಪ್ರಸಕ್ತ ವರ್ಷ | | | ಮುಂಬರುವ ವರ್ಷ | | |
|---|---|---|---|---|---|---|---|---|---|---|
| | | ಉಗ್ರಾಣದ ಬಳಕೆ | ಇತರ ಓ & ಎಂ ವೆಚ್ಚಗಳು | ಮೊತ್ತ | ಉಗ್ರಾಣದ ಬಳಕೆ | ಇತರ ಓ & ಎಂ ವೆಚ್ಚಗಳು | ಮೊತ್ತ | ಉಗ್ರಾಣದ ಬಳಕೆ | ಇತರ ಓ & ಎಂ ವೆಚ್ಚಗಳು | ಮೊತ್ತ |
| | ದುರಸ್ತಿ ಮತ್ತು ನಿರ್ವಹಣೆ ಇವರಿಗೆ : | | | | | | | | | |
| 1. | ಸ್ಥಾವರ ಮತ್ತು ಯಂತ್ರ | | | | | | | | | |
| 2. | ಕಟ್ಟಡಗಳು | | | | | | | | | |
| 3. | ಇತರ ಸಿವಿಲ್ ಕಾಮಗಾರಿ | | | | | | | | | |
| 4. | ಕೇಬಲ್ ಜಾಲ | | | | | | | | | |
| 5. | ವಾಹನಗಳು | | | | | | | | | |
| 6. | ಪೀಠೋಪಕರಣಗಳು ಮತ್ತು ಜೋಡಣೆಗಳು | | | | | | | | | |
| 7. | ಕಚೇರಿ ಸಾಮಗ್ರಿ | | | | | | | | | |
| 8. | ಇತರ | | | | | | | | | |
| | ಒಟ್ಟು | | | | | | | | | |

## ಸವಕಳಿ

**ಅನುಬಂಧ – 7**

| ಕ್ರಮ ಸಂಖ್ಯೆ | ಸ್ವತ್ತು ವಿವರ | ಹಿಂದಿನ ವರ್ಷ | | | | ಪ್ರಸಕ್ತ ವರ್ಷ | | | | ಮುಂಬರುವ ವರ್ಷ | | | |
|---|---|---|---|---|---|---|---|---|---|---|---|---|---|
| | | ವರ್ಷದ ಆರಂಭದಲ್ಲಿ ಸಂಗ್ರಹಿಸಿದ ಸವಕಳಿಯ ಬಾಕಿ | ವರ್ಷದ ಸವಕಳಿ | ಸವಕಳಿ ವಾಪಸಾತಿ | ವರ್ಷದ ಕೊನೆಯಲ್ಲಿ ಸಂಗ್ರಹಿಸಿದ ಸವಕಳಯ ಬಾಕಿ | ವರ್ಷದ ಆರಂಭದಲ್ಲಿ ಸಂಗ್ರಹಿಸಿದ ಸವಕಳಿಯ ಬಾಕಿ | ವರ್ಷದ ಸವಕಳಿ | ಸವಕಳಿ ವಾಪಸಾತಿ | ವರ್ಷದ ಕೊನೆಯಲ್ಲಿ ಸಂಗ್ರಹಿಸಿದ ಸವಕಳಿಯ ಬಾಕಿ | ವರ್ಷದ ಆರಂಭದಲ್ಲಿ ಸಂಗ್ರಹಿಸಿದ ಸವಕಳಿಯ ಬಾಕಿ | ವರ್ಷದ ಸವಕಳಿ | ಸವಕಳಿ ವಾಪಸಾತಿ | ವರ್ಷದ ಕೊನೆಯಲ್ಲಿ ಸಂಗ್ರಹಿಸಿದ ಸವಕಳಿಯ ಬಾಕಿ |
| 1 | ಭೂಮಿ ಮತ್ತು ಹಕ್ಕು | | | | | | | | | | | | |
| 2 | ಕಟ್ಟಡ ಮತ್ತು ನಿರ್ಮಾಣ | | | | | | | | | | | | |
| 3 | ಸಂಪರ್ಕ ಸಾಧನ | | | | | | | | | | | | |
| 4 | ಮೀಟರ್ ಸಾಧನಗಳು | | | | | | | | | | | | |
| 5 | ವಿ.ಸ್ಯಾಟ್ ಸಾಧನ | | | | | | | | | | | | |
| 6 | ಸಾದಿಲ್ವಾರು ವಸ್ತುಗಳು | | | | | | | | | | | | |
| 7 | ಇತರೆ | | | | | | | | | | | | |
| | ಮೊತ್ತ | | | | | | | | | | | | |

# ಬಡ್ಡಿ ಮತ್ತು ಹಣಕಾಸು ವೆಚ್ಚಗಳು

ಅನುಬಂಧ – 8

| ಕ್ರಮ ಸಂಖ್ಯೆ | ಸಂಸ್ಥೆ/ಬ್ಯಾಂಕ್ ಹೆಸರು | ವರ್ಷದ ಆರಂಭದಲ್ಲಿನ ಬಾಕಿ | ಪ್ರಸ್ತುತ ವರ್ಷದಲ್ಲಿ ಸ್ವೀಕರಿಸಿದ ಹಣ | ಈ ವರ್ಷದಲ್ಲಿ ಬಿಡುಗಡೆ ಮಾಡಿದ ಹಣ | ವರ್ಷದ ಕೊನೆಯಲ್ಲಿನ ಬಾಕಿ | ಬಡ್ಡಿಯ ದರ | ವರ್ಷದ ಬಡ್ಡಿ | ಷರಾ |
|---|---|---|---|---|---|---|---|---|
| 1 | ಸರಕಾರದಿಂದ ಸಾಲ | | | | | | | |
| 2 | ಇತರರಿಂದ ಸಾಲ – ಸುರಕ್ಷಿತ | | | | | | | |
| | ಎ) | | | | | | | |
| | ಬಿ) | | | | | | | |
| | ಸಿ) | | | | | | | |
| | ಒಟ್ಟು | | | | | | | |
| 3 | ಇತರರಿಂದ ಸಾಲ – ಸುರಕ್ಷಿತಗೊಳಿಸದ | | | | | | | |
| | ಎ) | | | | | | | |
| | ಬಿ) | | | | | | | |
| | ಸಿ) | | | | | | | |
| | ಒಟ್ಟು | | | | | | | |
| 5 | ಅಲ್ಪಾವಧಿ ಸಾಲ/ ದುಡಿಯುವ ಬಂಡವಾಳಕ್ಕೆ ಸಾಲ | | | | | | | |
| | ಎ) | | | | | | | |
| | ಬಿ) | | | | | | | |
| | ಸಿ) | | | | | | | |
| | ಒಟ್ಟು | | | | | | | |
| 6 | ಇತರರು | | | | | | | |
| | ಎ) | | | | | | | |
| | ಬಿ) | | | | | | | |
| | ಸಿ) | | | | | | | |
| | ಒಟ್ಟು | | | | | | | |
| | ಒಟ್ಟು ಮೊತ್ತ | | | | | | | |

| ದುಡಿಯುವ ಬಂಡವಾಳದ ಮೇಲಿನ ಬಡ್ಡಿ ಅನುಬಂಧ - 9 | | | | | | |
|---|---|---|---|---|---|---|
| ಕ್ರಮ ಸಂಖ್ಯೆ | ಸಾಲದ ಮೂಲ | ಈ ವರ್ಷದಲ್ಲಿ ತಂದ ಸಾಲ | ಬಡ್ಡಿ ದರ | ಸಾಲದ ಅವಧಿ | ಬಡ್ಡಿಯ ಮೊತ್ತ | ಷರಾ |
| 1 | | | | | | |
| 2 | | | | | | |
| 3 | | | | | | |
| 4 | | | | | | |
| 5 | | | | | | |
| 6 | | | | | | |
| 7 | | | | | | |
| 8 | | | | | | |
| | ಒಟ್ಟು ಮೊತ್ತ | | | | | |

# ಇತರ ವೆಚ್ಚಗಳು

ಅನುಬಂಧ – 10

ಲಕ್ಷ ರೂ. ಗಳಲ್ಲಿ

| ಕ್ರಮ ಸಂಖ್ಯೆ | ವೆಚ್ಚದ ವಿವರ | ಹಿಂದಿನ ವರ್ಷ | ಪ್ರಸಕ್ತ ವರ್ಷ (ಲಭ್ಯವಿರುವ ಅವಧಿಗೆ ವಾಸ್ತವಾಂಶ ಮತ್ತು ಉಳಿದ ಅವಧಿಗೆ ಅಂದಾಜು) | ಮುಂಬರುವ ವರ್ಷಕ್ಕೆ (ಅಂದಾಜು) | ಷರಾ |
|---|---|---|---|---|---|
| 1 | | | | | |
| 2 | | | | | |
| 3 | | | | | |
| 4 | | | | | |
| 5 | | | | | |
| 6 | | | | | |
| 7 | | | | | |
| 8 | | | | | |
| | ಮೊತ್ತ | | | | |

## ಪೂರ್ವಾವಧಿ ಹೊಂದಾಣಿಕೆಗಳು

ಅನುಬಂಧ - 11

ಲಕ್ಷ ರೂ. ಗಳಲ್ಲಿ

| ಕ್ರಮ ಸಂಖ್ಯೆ | ವಿವರ | ಹಿಂದಿನ ವರ್ಷ | ಪ್ರಸಕ್ತ ವರ್ಷಕ್ಕೆ ಅಂದಾಜು | ಮುಂಬರುವ ವರ್ಷಕ್ಕೆ ಅಂದಾಜು | ಷರಾ |
|---|---|---|---|---|---|
| 1 | | | | | |
| 2 | | | | | |
| 3 | | | | | |
| 4 | | | | | |
| 5 | | | | | |
| 6 | | | | | |
| 7 | | | | | |
| 8 | | | | | |
| | ಮೊತ್ತ | | | | |

## ಬಂಡವಾಳದ ಮೇಲಿನ ಲಾಭ

ಅನುಬಂಧ – 12

ಲಕ್ಷ ರೂ. ಗಳಲ್ಲಿ

| ಕ್ರಮ ಸಂಖ್ಯೆ | ಸಲ್ಲಿಕೆಯ ಲೆಕ್ಕಾಚಾರದ ಆಧಾರ | ಹಿಂದಿನ ವರ್ಷ | ಪ್ರಸಕ್ತ ವರ್ಷಕ್ಕೆ ಅಂದಾಜು | ಮುಂಬರುವ ವರ್ಷಕ್ಕೆ ಅಂದಾಜು | ಷರಾ |
|---|---|---|---|---|---|
| 1 | | | | | |
| 2 | | | | | |
| 3 | | | | | |
| 4 | | | | | |
| 5 | | | | | |
| 6 | | | | | |
| 7 | | | | | |
| 8 | | | | | |
| | ಮೊತ್ತ | | | | |

ಅನುಬಂಧ - 13

# ಇತರ ಆದಾಯ

| ಕ್ರಮ ಸಂಖ್ಯೆ | ವಿವರಗಳು | (ಲಕ್ಷ ರೂ.ಗಳಲ್ಲಿ) | | | ಷರಾ |
|---|---|---|---|---|---|
| | | ಹಿಂದಿನ ವರ್ಷ | ಪ್ರಸಕ್ತ ವರ್ಷಕ್ಕಾಗಿ ಅಂದಾಜು | ಮುಂಬರುವ ವರ್ಷಕ್ಕಾಗಿ ಅಂದಾಜು | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | (ಲಕ್ಷ ರೂ.ಗಳಲ್ಲಿ) | | | | |

# ರಾಜ್ಯ ಗ್ರಿಡ್‌ನ ಸಂಪರ್ಕದ ನೋಂದಣಿಗಾಗಿ ಅರ್ಜಿ

| ಕ್ರಮ ಸಂಖ್ಯೆ | ವಿವರಗಳು | |
|---|---|---|
| 1 | ಉತ್ಪಾದನಾ ಕಂಪನಿ/ಪ್ರಸರಣ ಲೈಸೆನ್ಸುದಾರರ ಹೆಸರು | |
| | | |
| | | |
| 2 | ನೋಂದಾಯಿತ ವಿಳಾಸ | |
| | | |
| | | |
| | | |
| 3 | ದೂರವಾಣಿ ಸಂಖ್ಯೆ / ಫ್ಯಾಕ್ಸ್ / ಇ-ಮೈಲ್ | |
| | | |
| | | |
| 4 | ಸಾಮರ್ಥ್ಯ. ಉತ್ಪಾದನಾ ಕೇಂದ್ರದ ಪ್ರಕರಣದಲ್ಲಿ ಮೆ.ವಾ.ಗಳಲ್ಲಿ ಸ್ಥಾಪಿತ ಸಾಮರ್ಥ್ಯ ಪ್ರಸರಣ ಲೈಸೆನ್ಸುದಾರರ ಪ್ರಕರಣದಲ್ಲಿ ಪ್ರಸರಣ ಮಾರ್ಗದ ಕಿ.ವಿಾ.ಗಳಲ್ಲಿ ಮೆ.ವಾ.ನಲ್ಲಿ ಸಾಮರ್ಥ್ಯ. | |
| | | |
| 5 | ರಾಜ್ಯ ಗ್ರಿಡ್‌ನೊಂದಿಗೆ ಸಂಪರ್ಕಗೊಳ್ಳುವ ಉದ್ದೇಶಿತ ದಿನಾಂಕ | |
| | | |
| 6 | ಅಂತರ್ ಸಂಪರ್ಕದ ಬಿಂದುವಿನ ವಿವರಗಳು (ಅಗತ್ಯವಿದ್ದರೆ ಪ್ರತ್ಯೇಕ ಹಾಳೆ ಲಗತ್ತಿಸಿ) | |
| | | |
| 7<br>ಹುಂಡಿ | ಎಸ್‌ಎಲ್‌ಡಿಸಿಗೆ ಸಂದಾಯ ಮಾಡಬೇಕಾದ ನೋಂದಣಿ ಶುಲ್ಕದ ಮತ್ತು ಪಡೆದ ದಿನಾಂಕ | |
| | | |
| | ಪ್ರಮಾಣ : | |
| | ನಾವು, ಗ್ರಿಡ್ ನಿರ್ವಹಣೆಗೆ ಬಿಡುಗಡೆ ಮಾಡಲಾದ ಅನುದೇಶಗಳಿಗೆ ಬದ್ಧವಾಗಿರುವುದಾಗಿ ಈ ಮೂಲಕ ಪ್ರಮಾಣ ಮಾಡುತ್ತೇವೆ. | |
| | | |
| | | |
| | | |
| | | ಪ್ರಾಧಿಕೃತ ಅಧಿಕಾರಿಯ ಸಹಿ |

ಸೂಚನೆ : ಎಸ್‌ಎಲ್‌ಡಿಸಿಯು 'ಉತ್ಪಾದನಾ ಕಂಪನಿಗಳ ಪ್ರಸರಣ ಕಂಪನಿಗಳಿಂದ ಪ್ರತ್ಯೇಕವಾಗಿ ಅಗತ್ಯ ತಾಂತ್ರಿಕ ವಿವರಗಳನ್ನು ನಿಗದಿಪಡಿಸಬಹುದು ಮತ್ತು ಸಂಗ್ರಹಿಸಬಹುದಾಗಿದೆ.